ದಿಃ 02-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು **: 1** ರಿಂದ **3** ನೇ ಪ್ರತಿವಾದಿಗಳ ಪರ ಶ್ರೀ**.**ವಿ**.**ವಿ**.**ಕೆ ವಕೀಲರಿಂದಃ</u>

ಭಾಗ ಕೋರಿ ಈ ದಾವೆ ಹೂಡಿದ್ದೇನೆ. ದಾವಾ ಆಸ್ತಿ ನನ್ನ ತಾತನಿಗೆ ಸೇರಿದ್ದು. ನನ್ನ ತಾತನಿಗೆ 4 ಜನ ಮಕ್ಕಳು ಎಂದರೆ ಸರಿ. ನನ್ನ ತಾತನ ಮೊದಲನೇ ಮಗಳು ಸಿದ್ದಮ್ಮನಿಗೆ ಒಬ್ಬಳೇ ಮಗಳು 1 ನೇ ಪ್ರತಿವಾದಿ. ನನ್ನ ತಾತನ ಕೊನೆಯ ಮಗಳಾದ ನರಸಮ್ಮ ರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. 2002 ರ ನಂತರ ನಾನು ಯಾವುದೇ ಜಮೀನನ್ನು ಮಾರಾಟ ಮಾಡಿಲ್ಲ. ಲಗುಮಪ್ಪ ನಮ್ಮ ಗ್ರಾಮದವರು. ದಿನಾಂಕ 09-01-2012 ರಲ್ಲಿ ಸರ್ವೆ ನಂ.120/1 ರಲ್ಲಿ 28 ಗುಂಟೆ ಜಮೀನನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿ.ಸಾಕ್ಷಿಯು ಮುಂದುವರೆದು ಪ್ರತಿವಾದಿಗಳೂ ಸಹ 2006 ರಲ್ಲಿ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಿನಾಂಕ 09-01-2012 ರಂದು ಆದಂತಹ ಕ್ರಯ ಪತ್ರದಲ್ಲಿ ಆಸ್ತಿಯು ವಿಭಾಗದ ಮುಖಾಂತರ ಬಂದಿರುತ್ತದೆ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರಕ್ಕೆ ನಾನು ಮತ್ತು ನನ್ನ ಮಕ್ಕಳು ಸಹಿ ಮಾಡಿರುತ್ತೇವೆ ಎಂದರೆ ಸರಿ. 2012 ರಲ್ಲಿ ಮಾರಟ ಮಾಡಿದಂತಹ 5 ನೇ ಐಟಂ ಆಸ್ತಿಯಲ್ಲೂ ಸಹ ಪಾಲು ಕೇಳುತ್ತಿದ್ದೇನೆ ಎಂದರೆ ಸರಿ.

ದಿನಾಂಕ 09-01-2012 ರಂದು ಸರ್ವೇ ನಂ.115/3 ರಲ್ಲಿ 37 ಗುಂಟೆ ಪೈಕಿ 9 ಗುಂಟೆ ಜಮೀನನ್ನು ಭಾಗ್ಯಮ್ಮ ರವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲೂ ಸಹ ಸದರಿ ಆಸ್ತಿ ವಿಭಾಗದ ಮುಖಾಂತರ ಬಂದಿರುವುದಾಗಿ ಬರೆಸಿದ್ದೇವೆ ಎಂದರೆ ಸರಿ. ನರಸಮ್ಮ ರವರು ನಮ್ಮ ಗ್ರಾಮದಲ್ಲೇ ಇದ್ದಾರೆ. ಭಾಗ್ಯಮ್ಮನಿಗೆ ಮಾರಾಟ ಮಾಡಿದ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿದ್ದೇವೆ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನನ್ನ ಮಗ ಸಹ ಪ್ರತ್ಯೇಕ

ದಾವೆಯನ್ನು ಗೌರವಾನ್ವಿತ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಹೂಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಹೆಚ್ಚು ಸರ್ವೆ ನಂಬರ್ ಗಳ ಆಸ್ತಿಗಳು ಇವೆ ಎಂದರೆ ಸರಿ. ಟ್ರ್ಯಾಕ್ಟರ್ ಗೆ ಸಂಬಂಧಿಸಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಸದರಿ ಟ್ರ್ಯಾಕ್ಟರ್ ಯಾರು ಮತ್ತು ಯಾರ ಹೆಸರಿನಲ್ಲಿ ಹಾಗೂ ಯಾವಾಗ ತೆಗೆದುಕೊಂಡರು ಎಂದು ಗೊತ್ತಿಲ್ಲ. ಸದರಿ ಟ್ರ್ಯಾಕ್ಟರ್ ಅನ್ನು ಪ್ರತಿವಾದಿಗಳು ಈಗಾಗಲೇ ಮಾರಿಕೊಂಡಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು